ಪ್ರಮಾಣ ವಚನ ಬೋಧಿಸಿದ ದಿನಾಂಕಃ07.07.2026
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಯರ ಪರ ಶ್ರೀ ಜೆ.ಬಿ.ಡಿ ವಕೀಲರಿಂದ**

ನನ್ನ ತಾಯಿಯ ಹೆಸರು ನಂಜಮ್ಮ ಎಂದರೆ ಸರಿ. ನನ್ನ ತಾಯಿಗೆ ಅವರ ತಂದೆಯಾದ ದೊಡ್ಡೆಗೌಡರು ಪಿಂಡಕೂರು ತಿಮ್ಮನಹಳ್ಳಿಯ ಸರ್ವೆ ನಂ.4/4 ರಲ್ಲಿ 2 ಎಕರೆ 30 ಗುಂಟೆಯನ್ನು ದಾನ ಪತ್ರದ ಮೂಲಕ ನೀಡಿದ್ದಾರೆಂದರೆ ಸರಿ. ಸದರಿ ಆಸ್ತಿಯನ್ನು ನಾನು ಮತ್ತು ನನ್ನ ತಾಯಿ ಸೇರಿ ಗೋಪಾಲಹೆಗಡೆಯವರಿಗೆ ಮಾರಾಟ ಮಾಡಿದ್ದೇವೆಂದರೆ ಸಾಕ್ಷಿಯು ನಮ್ಮ ತಾಯಿ ಒಬ್ಬರೆ ಮಾರಾಟ ಮಾಡಿದ್ದಾರೆಂದು ಹೇಳುತ್ತಾರೆ. ಅದೇ ರೀತಿ ಶಿವಪುರ ಗ್ರಾಮ ಸರ್ವೆ ನಂ.6/7 ರಲ್ಲಿ 1 ಎಕರೆ 14 ಗುಂಟೆ ಮತ್ತು ಸರ್ವೆ ನಂ.139 ರಲ್ಲಿ 12 ಗುಂಟೆಯನ್ನು ನನ್ನ ತಾತ ದೊಡ್ಡೆಗೌಡರು ನನ್ನ ಅಕ್ಕನಾದ ನಾರಾಯಣಮ್ಮನವರಿಗೆ ವಿಲ್ ಮೂಲಕ ನೀಡಿದ್ದಾರೆಂದರೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ನಾನು ಮತ್ತು ನನ್ನ ಅಕ್ಕ ಸೇರಿ ಮಾರಾಟ ಮಾಡಿದ್ದೇವೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಗನಾದ ಅಶೋಕ್ ರವರು ಅಸಲು ದಾವಾ ಸಂಖ್ಯೆಃ149/2012 ರಲ್ಲಿ ವಿಭಾಗಕ್ಕಾಗಿ ಕೇಸು ಹಾಕಿದಾಗ ನನ್ನ ಸಹೋದರಿಯರಿಂದ ಹಕ್ಕು ನಿವೃತ್ತಿ ಪತ್ರವನ್ನು ಬರೆಸಿಕೊಂಡಿದ್ದೇವೆಂದರೆ ಸಾಕ್ಷಿಯು ನನ್ನ ಸಹೋದರಿಯರು ಹಕ್ಕು ನಿವೃತಿ ಪತ್ರವನ್ನು ಬರೆದುಕೊಟ್ಟಿರುವುದು ಸರಿ ಆದರೆ ಸದರಿ ವಿಭಾಗದ ದಾವೆ ಹಾಕಿದ ಕಾರಣಕ್ಕಾಗಿ ನನ್ನ ಸಹೋದರಿಯರ ಕಡೆಯಿಂದ ಸದರಿ ಪತ್ರವನ್ನು ಬರೆಸಿಕೊಂಡಿಲ್ಲ ಎಂದು ಹೇಳುತ್ತಾರೆ. ನನಗೆ ವಿಭಾಗ ಆಗಿರುವ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ 5 ನೇ ಪ್ರತಿವಾದಿಯ ಪರ ಶ್ರೀಮತಿ ಡಿ.ಎಸ್ ವಕೀಲರಿಂದ**

ದಿನಾಂಕಃ**22.08.2005** ರಲ್ಲಿ 5 ನೇ ಪ್ರತಿವಾದಿಯು 1 ರಿಂದ 3 ನೇ ಪ್ರತಿವಾದಿ ಮತ್ತು ದ್ರಾಕ್ಷಾಯಿಣಿ ಕಡೆಯಿಂದ ಐಟಂ ನಂ.1 ರ ಆಸ್ತಿಯನ್ನು ಖರೀದಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ 5 ನೇ ಪ್ರತಿವಾದಿಯ ಐಟಂ ನಂ.1 ರ ಖಾತೆಯನ್ನು ವರ್ಗಾವಣೆ ಮಾಡಿಕೊಂಡಿದ್ದಾರೆಂದರೆ ಗೊತ್ತಿಲ್ಲ. 5 ನೇ ಪ್ರತಿವಾದಿಯೇ ಐಟಂ ನಂ.1 ರಲ್ಲಿ ಸ್ವಾಧೀನ ಹೊಂದಿ ಅನುಭವಿಸುತ್ತಿದ್ದಾರೆಂದರೆ ಗೊತ್ತಿಲ್ಲ. ಐಟಂ ನಂ.1 ಆಸ್ತಿಯನ್ನು ದೊಡ್ಡೇಗೌಡರು 1 ನೇ ಪ್ರತಿವಾದಿಗೆ ದಿನಾಂಕಃ**17.10.2004** ರ ವಿಲ್ಲಿನ ಮೂಲಕ ನೀಡಿದ್ದಾರೆಂದರೆ ಗೊತ್ತಿಲ್ಲ. ಇವೆಲ್ಲಾ ವಿಚಾರ ಗೊತ್ತಿದ್ದರೂ ಕೂಡ 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿದ್ದೇನೆಂದರೆ ಸರಿಯಲ್ಲ. ಐಟಂ 1 ರ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ನನಗೆ ಅದರಲ್ಲಿ ಯಾವುದೇ ಹಿಸ್ಸೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ಕೇಸು ಹಾಕುವ ಉದ್ದೇಶದಿಂದ ದಿನಾಂಕಃ**08.02.2016** ರಂದು ನನ್ನ ಸಹೋದರಿಯರ ಕಡೆಯಿಂದ ಹಕ್ಕು ನಿವೃತ್ತಿ ಪತ್ರವನ್ನು ಬರೆಸಿಕೊಂಡಿದ್ದೇನೆಂದರೆ ಸರಿಯಲ್ಲ.

**1 ರಿಂದ 3 ನೇ ಪ್ರತಿವಾದಿಯರ ಪರವಾಗಿ ಮಾಡಿದ ವಾಟಿ ಸವಾಲನ್ನು ಅಳವಡಿಸಿಕೊಳ್ಳಲು ಪ್ರಾರ್ಥಿಸುತ್ತಾರೆ.**

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.